ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯದಲ್ಲಿ, ಸಿರಾ

<u>ಸಿ.ಸಿ. ನಂ. **3884/2022**</u>

ಪಿರ್ಯಾದಿ : ಸರ್ಕಾರದ ಪರವಾಗಿ ಕಳ್ಳಂಬೆಳ್ಳ
ಪೊಲೀಸರು

ವಿರುದ್ಧ

ಆರೋಪಿ **:** ವಿನೋದ್ ಕುಮಾರ್ (ಅ) ವಿನೋದ್
ಬಿನ್. ತಂಗರಾಜು
30 ವರ್ಷ,
ಚಾಲಕ,
ವಾಸಃ ವೆಂಕಟೇಶ್ವ ದೇವಸ್ಥಾನದ ಹತ್ತಿರ
ಕೆಂಗುಂಟೆ
ಬೆಂಗಳೂರು

<u>ಆಪಾದನಾ ಸಾರಾಂಶ</u>

ದಿನಾಂಕ 25.07.2022 ರಂದು, ಬೆಳಗಿನ ಜಾವ 3-30 ಗಂಟೆ ಸಮಯದಲ್ಲಿ, ಕಳ್ಳಂಬೆಳ್ಳ ಪೊಲೀಸ್ ಠಾಣಾ ಸರಹದ್ದು, ಹೈವೇ ಪ್ಯಾಲೆಸ್ ಹೋಟೇಲ್ ಮುಂಭಾಗ ಸಿರಾ ಕಡೆಯಿಂದ ತುಮಕೂರು ಕಡೆಗೆ ಹೋಗುವ ಎನ್ ಹೆಚ್ 48 ರಸ್ತೆಯಲ್ಲಿ, ಆರೋಪಿಯಾದ ನೀವು ನಿಮ್ಮ ಬಾಬ್ತು ಮಿನಿ ಬಸ್ ನಂ. ಕೆಎ-51-ಎಬಿ-1944 ನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ನಿಮ್ಮ ಬಾಬ್ತು ವಾಹನದ ಮುಂದೆ ಹೋಗುತ್ತಿದ್ದ ಕೆಎ-64-2944 ನಂಬರಿನ ಲಾರಿಯ ಹಿಂಭಾಗಕ್ಕೆ ಢಿಕ್ಕಿ ಹೊಡೆಸಿ ಅಪಘಾತ ಉಂಟು ಮಾಡಿದ್ದು ಇದರಿಂದ ನೀವು ಭಾ ದಂ ಸಂ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮಾಡಿದ ಅಪಘಾತದಿಂದ ಸಾಕ್ಷಿ- 6 ರವರಿಗೆ ಸಾಮಾನ್ಯ ಸ್ವರೂಪದ ಗಾಯವಾಗಿದ್ದು ಇದರಿಂದ ನೀವು ಭಾ ದಂ ಸಂ ಕಲಂ 337 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮಾಡಿದ ಅಪಘಾತದಿಂದ ಸಾಕ್ಷಿ- 4 ಮತ್ತು 5 ರವರಿಗೆ ತೀವ್ರ ಸ್ವರೂಪದ ಗಾಯವಾಗಿದ್ದು ಇದರಿಂದ ನೀವು ಭಾ ದಂ ಸಂ ಕಲಂ 338 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಪ್ರಶ್ನೆ - 1. ಈಗ ಓದಿದ ಆಪಾದನಾ ಸಾರಾಂಶ ನಿಮಗೆ ಅರ್ಥವಾಯಿತೆ?

ಉತ್ತರಃ

ಪ್ರಶ್ನೆ -2. ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

ದಿನಾಂಕಃ 23.11.2022

**(ಸಂದೀಶ್ ಟಿ.ಎಲ್)**
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಸಿರಾ